8. ನಗರದಲ್ಲಿರುವ ಟೂರಿಸ್ಟ್ ಬಸ್ ಬುಕಿಂಗ್ ಆಫೀಸ್ ಅವರ ಬಸ್‌ಗಳನ್ನು ನಗರದಾಚೆಯಿಂದ ಸಂಚರಿಸುವಂತೆ ಮಾಡಿ ಅಲ್ಲಿಂದ ನಗರದೊಳಗೆ ಬರಲು ಮತ್ತು ಹೋಗಲು (ಪ್ರಯಾಣಿಕರನ್ನು ಸಾಗಿಸಲು) ಮಿನಿ ಟೆಂಪೊಗಳನ್ನು ಉಪಯೋಗಿಸುವಂತೆ ಮಾಡುವುದು.
9. ಕಬ್ಬಿಣ ಮತ್ತು ಉಕ್ಕು ಸಾಮಾಗ್ರಿಗಳ ಮಾರಾಟಗಾರರನ್ನು ಕೃಷ್ಣರಾಜಪುರಂ ಹತ್ತಿರ ಸ್ಥಳಾಂತರಿಸುವುದು.
10. ಬಾಳೆಕಾಯಿ ಮಂದಿಗಳನ್ನು ಬಿನ್ನಿಮಿಲ್ ಹತ್ತಿರ ಹೊಸದಾಗಿ ಕಟ್ಟಿರುವ ಮಾರುಕಟ್ಟೆಗೆ ಬದಲಾಯಿಸುವುದು.
11. ಕೆಲವು ಸರ್ಕಾರಿ ಕಛೇರಿಗಳು, ಹೊಸದಾಗಿ ತೆರೆಯುವ ಸರ್ಕಾರಿ ಕಛೇರಿಗಳನ್ನು ನಗರದ ಹೊರ ವಲಯಕ್ಕೆ ಸ್ಥಳಾಂತರಿಸುವುದು.
12. ನಗರದ ವಾಣಿಜ್ಯೋದ್ಯಮ ಪ್ರದೇಶಗಳಲ್ಲಿ ವಾಹನ ನಿಲುಗಡೆಯ ಅವಧಿಯನ್ನು ನಿಯಂತ್ರಿಸುವುದು.
13. ಬಿ.ಟಿ.ಎಸ್. ನಿಲ್ದಾಣಗಳನ್ನು ವಿಶಾಲ ಪ್ರದೇಶಗಳಿಗೆ ಸ್ಥಳಾಂತರಿಸುವುದು.
14. ಸಾಧ್ಯವಿರುವ ಎಲ್ಲಾ ರಸ್ತೆಗಳನ್ನು ವಿಶಾಲಗೊಳಿಸುವುದು.
15. ಲಾರಿ, ಟ್ರಕ್‌ಗಳಿಗೆ ಟರ್ಮಿನಲ್‌ಗಳ ಸ್ಥಾಪನೆ.
16. ಬೆಂಗಳೂರು ನಗರ ರಿಂಗ್ ರೋಡ್ ಸ್ಥಾಪನೆ.
17. ಪಾದಚಾರಿ ವ್ಯಾಪಾರ ವಲಯಗಳಲ್ಲಿ ಹಾಗೂ ಪಾದಚಾರಿ ವ್ಯಾಪಾರ ನಿಷೇಧಿತ ಪ್ರದೇಶಗಳ ಕಡ್ಡಾಯ ಜಾರಿ ವ್ಯವಸ್ಥೆ.

ಆ) ಹೌದು.

**ನಗರದ ಕೆಲವೆಡೆ ಮಿನಿ ಬಸ್ಸುಗಳನ್ನು ಓಡಿಸುವುದು**

388 - ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ನಗರ ಪಾಲಿಕೆ ಒತ್ತಡ ತಗ್ಗಿಸಲು ವಿವಿಧ ಬಡಾವಣೆಗಳ ನಡುವೆ ಬಿ.ಟಿ.ಎಸ್. ದೊಡ್ಡ ಬಸ್ಸುಗಳ ಬದಲಿಗೆ ಮಿನಿ ಬಸ್ಸುಗಳನ್ನು ಟೆಂಪೊಗಳನ್ನು ಸಾರ್ವಜನಿಕರ ಉಪಯೋಗಕ್ಕೆ ಓಡಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವವರೇ?*

ಆ) *ನಗರ ಸಾರಿಗೆಯನ್ನು ಉತ್ತಮಗೊಳಿಸಲು ಆರಿಸಿದ ಬಡಾವಣೆಗಳಲ್ಲಿ ಪಾಸಗಿಯವರಿಗೆ ಮಿನಿ ಬಸ್ ಮತ್ತು ಟೆಂಪೋಗಳನ್ನು ಓಡಿಸಲು ಅವಕಾಶ ನೀಡುವ ಬಗ್ಗೆ ಸರ್ಕಾರದವರು ಪರೀಕ್ಷಿಸುವರೇ?*

ಇ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

**ಬೆಣ್ಣೆತೋರೆ ಸೇತುವೆಯ ಬಗ್ಗೆ**

245 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?